ನೀರು ಹರಿಸುವ ಕಾರ್ಯಕ್ರಮವಿದೆ.

ಅಂಬ್ಲಿಗೊಳ ಜಲಾಶಯದ ಕಾಮಗಾರಿ ಮಂಜೂರಾತಿ

1404 (1723) ಶ್ರೀ ಬಿ.ಎನ್.ಮಹಾಲಿಂಗಪ್ಪ (ಶಿಕಾರಿಪುರ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಬ್ಲಿಗೊಳ ಜಲಾಶಯದ ಚಾನಲ್ ಲೈನಿಂಗ್ ಬಗ್ಗೆ ಮಂಜೂರಾದ ಹಣ ಎಷ್ಟು?

ಆ) ಕಾಮಗಾರಿ ಕೆಲಸ ಎಷ್ಟು ಆಗಿದೆ?

ಇ) ಎಷ್ಟು ಹಣ ಉಳಿದಿದೆ?

ಈ) ಈ ಕೆಲಸ ಪೂರ್ಣಗೊಳ್ಳದಿರಲು ಕಾರಣ ಏನು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಅಂಬ್ಲಿಗೊಳ ಜಲಾಶಯದ ಏರಿ ಮತ್ತು ಕೋಡಿ ಎತ್ತರಿಸುವ ಕಾಮಗಾರಿಯ ಅಂದಾಜು ಪಟ್ಟಿಯು ರೂ.178.00 ಲಕ್ಷಗಳಿಗೆ ಮಂಜೂರಾಗಿರುತ್ತದೆ. ಅದರಲ್ಲಿ ಅಂಬ್ಲಿಗೊಳ ಎಡನಾಲೆಯ ಅಭಿವೃದ್ಧಿ ಮತ್ತು 2.40 ಕಿ.ಮೀ. ಉದ್ದ ಕಾಲುವೆ ಲೈನಿಂಗ್‌ಗೆ ರೂ.63.99 ಲಕ್ಷಗಳು ಮಂಜೂರಾಗಿರುತ್ತದೆ.

ಆ) ಎಡದಂಡೆ ಕಾಲುವೆಯ 2.40 ಕಿ.ಮಿ. ರೈನಿಂಗ್ ಕೆಲಸದಲ್ಲಿ 1.00 ಕಿ.ಮೀ. ಉದ್ದದ ಕಾಲುವೆ ಲೈನಿಂಗ್ ಕೆಲಸವು ಪೂರ್ಣಗೊಂಡಿದೆ.

ಇ) ಕಾಲುವೆ ಲೈನಿಂಗ್ ಕೆಲಸ ಸಂಬಂಧ ರೂ.38.00 ಲಕ್ಷ ಗಳ ಕೆಲಸ ಬಾಕಿ ಉಳಿದಿದೆ

ಈ) ಈ ಕಾಮಗಾರಿಗೆ 2000-01 ರಿಂದ ಈವರೆಗೆ ಲೆಕ್ಕ ಶೀರ್ಷಿಕೆ 4701 ಅಡಿಯಲ್ಲಿ ಅನುದಾನ ಒದಗಿಸಿರುವುದಿಲ್ಲ. ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಸಂಸ್ಥೆಗೆ ಈ ಕಾಮಗಾರಿಯನ್ನು ವಹಿಸಿದ್ದು, ಸಂಸ್ಥೆಯನ್ನು ಮುಚ್ಚುದಂತೆ ಸರ್ಕಾರವು ನಿರ್ಧಾರ ಕೈಗೊಂಡಿರುವ ಹಿನ್ನಲೆಯಲ್ಲಿ ಈ ಕಾಮಗಾರಿಯನ್ನು ಪೂರ್ಣಗೊಳಿಸಿರುವುದಿಲ್ಲ.

ಕಪ್ಪನಹಳ್ಳಿ ಕಾಲು ಸೇತುವೆ ಬಗ್ಗೆ

1406 (1725) ಶ್ರೀ ಮಹಾಲಿಂಗಪ್ಪ .ಬಿ.ಎನ್ (ಶಿಕಾರಿಪುರ): ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಪ್ಪನಹಳ್ಳಿ ಕಾಲು ಸೇತುವೆ ಕಾಮಗಾರಿ ಮಂಜೂರಾಗಿದೆಯೆ

ಆ) ಮಂಜೂರಾಗಿದ್ದಲ್ಲಿ ಎಂದಿನಿಂದ ಕೆಲಸ ಪ್ರಾರಂಭಿಸಲಾಗುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಬಿಜಾಪುರ ಕೃಷಿ ಮಹಾ ವಿದ್ಯಾಲಯಕ್ಕೆ ಕಟ್ಟಡ ನಿರ್ಮಿಸಲು ಅನುದಾನ

1407 (1707) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಿಜಾಪುರದಲ್ಲಿ ಕೃಷಿ ಮಹಾವಿದ್ಯಾಲಯ ಇರುವ ವಿಷಯ ಸರ್ಕಾರಕ್ಕೆ ಗೊತ್ತಿದೆಯೇ ;

ಆ) ಹಾಗಿದ್ದರೆ, ಈ ಮಹಾವಿದ್ಯಾಲಯಕ್ಕೆ ಇಲ್ಲಿಯವರೆಗೂ ಮುಖ್ಯ ಕಟ್ಟಡ ಇಲ್ಲದಿರುವುದರ ಬಗ್ಗೆ ಹಾಗೂ ಕೆಲವು ಕಟ್ಟಡಗಳ ಕಾಮಗಾರಿ ಅರ್ಧಕ್ಕೆ ನಿಂತಿರುವ ಬಗ್ಗೆ ಸರ್ಕಾರ ಗಮನ